ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಈಗ ಮಾನ್ಯ ಸದಸ್ಯರು ಏನೇನು ಕೇಳಿದ್ದಾರೆ, ಸ್ಕೂಲು, ಕಾಲೇಜು ಎಲ್ಲವನ್ನು ಅವರಿಗೆ ಕೊಡಿ ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು.—ಎಜುಕೇಷನ್ ಡಿಮ್ಯಾಂಡ್ ಬಂದಾಗ ಅದರ ಮೇಲೆ ಮಾನ್ಯ ಸದಸ್ಯರು ಮಾತನಾಡ ಬಹುದು. ಆಗ ಮಾನ್ಯ ಸದಸ್ಯರು ತಮ್ಮ ತಮ್ಮ ಸಲಹೆಗಳನ್ನು ಕೊಡಬಹುದು.

ಶ್ರೀ ಬಿ. ಭಾಸ್ಕರ ನಾಯ್ಡು.—ಬಳ್ಳಾರಿಗೆ ಇಂಜಿನಿಯರಿಂಗ್ ಕಾಲೇಜ್ ಕೊಡುತ್ತೇವೆ ಎಂದು ಈಗ ಈ ಸಭೆಯಲ್ಲಿ ಮಾನ ವಿದ್ಯಾ ಮಂತ್ರಿಗಳು ಅನೌನ್ಸ್ ಮಾಡಲಿ. All the seats are being filled by taking money. I know the poverty of my people and students.

CALLING ATTENTION TO MATTERS OF URGENT PUBLIC IMPORTANCE

re:—Hardship caused to the Milk Producers due to non-enhancement of milk procurement rate by KDDC

SRI K.H. HANUME GOWDA.—Sir, I call the attention of the Minister for Law, Parliamentary Affairs and Animal Husbandry to the hardship caused to Milk Producers due to non-enhancement of milk procurement rate by KDDC.

SRI Y. RAMARRISHNA (Hon. Minister for Law, Parliamentary Affairs and Animal Husbandry).—Sir, I wish to make the following Statement :

ಕರ್ನಾಟಕ ಹೈನುಗಾರಿಕೆ ಅಭಿವೃದ್ಧಿ ಕಾರ್ಪೊರೇಷನ್ನಿನವರು ಹಾಲು ಸಂಗ್ರಹಣೆಗಾಗಿ ನಿಗೆದಿಪಡಿಸಿದ ಬೆಲೆಯು ವರ್ಷದ ಬೇರೆ ಬೇರೆ ಋತುಗಳಲ್ಲಿ ಬೇರೆ ಬೇರೆಯಾಗಿದೆ. ೧೯೭೭ರ ಜುಲೈನಿಂದ ಇಲ್ಲಿಯವರೆಗೆ ಹಾಲು ಉತ್ಪಾದಕರಿಗೆ ಕೊಟ್ಟ ಸಂಗ್ರಹಣಾ ಬೆಲೆ ಹೀಗಿದೆ.

ಅವಧಿ	ಬೆ. ಜಿ. ಹೈನುಗಾರಿಕೆ ಕೂಬ್ಪರೇಷನ್ ಸಹಾಯಕ ಬೆ. ಜ. ರಿಜಿಸ್ಟ್ರಾರ್ ಡೈರಿ ಹಾಲಿನ ಸಂಗ್ರಹಣಾ ಬೆಲೆ
೧೯೭೭ರ ಜುಲೈ ೧ರಿಂದ ಆಗಸ್ಟ್‌ವರೆಗೆ	೦.೪೦
೧೯೭೭ರ ಸೆಪ್ಟೆಂಬರ್ ೧ರಿಂದ ನವೆಂಬರ್ ೧೫ರವರೆಗೆ	೦.೫೦
೧೯೭೭ರ ನವೆಂಬರ್ ೧೬ರಿಂದ ನವೆಂಬರ್ ೩೦ರವರೆಗೆ	೦.೪೦
೧೯೭೭ರ ಡಿಸೆಂಬರ್ ೧ರಿಂದ ಮಾರ್ಚ್ ೭ರವರೆಗೆ	೦.೩೦
೧೯೭೮ರ ಮಾರ್ಚ್ ೮ರಿಂದ ಏಪ್ರಿಲ್ ೩೦ರವರೆಗೆ	೦.೪೦
೧೯೭೮ರ ಮೇ ೧ರಿಂದ ನವೆಂಬರ್‌ವರೆಗೆ	೦.೪೫
೧೯೭೮ರ ಡಿಸೆಂಬರ್ ೧ರಿಂದ ೧೯೭೯ರ ಫೆಬ್ರವರಿ ೨೮ರವರೆಗೆ	೦.೩೫
೧೯೭೯ರ ಮಾರ್ಚ್ ೧ರಿಂದ	೦.೪೫

ಸಂಗ್ರಹಿಸಿದ ಹಾಲಿನಲ್ಲಿ ಸಾಮಾನ್ಯವಾಗಿ ಶೇ. ೫.೨ರಷ್ಟು ಕೊಬ್ಬಿನಂಶವಿರುತ್ತದೆ. ಶೇ. ೫.೫ ರಷ್ಟು ಕೊಬ್ಬಿನಂಶವಿರುವ ಹಾಲಿನ ಬೆಲೆ ಈಗಿನ ದರದ ಪ್ರಕಾರ ಪ್ರತಿ ಕೆ.ಜಿ.ಗೆ ರೂ. ೧.೮೦ ಆಥವಾ ಒಂದು ಲೀಟರ್‌ಗೆ ರೂ. ೧.೮೫.

ಇತ್ತೀಚೆಗೆ ಹಾಲು ಉತ್ಪಾದನಾ ವೆಚ್ಚ ಹೆಚ್ಚಿದೆಯೆಂಬುದು ನಿಜ. ಪ್ರಾಣಿಗಳ ಬೆಲೆ, ಮೇವು, ಜಾನುವಾರು-ಮೇವು. ಸಾರಿಗೆ ಮತ್ತು ಇತರ ಪರಿಕರಗಳ ವೆಚ್ಚವೂ ಇದರಲ್ಲಿ ಸೇರಿದೆ.

ಇತ್ತೀಚೆಗೆ, ಅದರಲ್ಲೂ ಮುಖ್ಯವಾಗಿ ಕಳೆದ ಕೆಲವು ತಿಂಗಳಿಂದೀಚೆಗೆ ಈ ಪರಿಕರಗಳ ಬೆಲೆ ಏರಿರುವ ವಿಷಯ ಸರ್ಕಾರಕ್ಕೆ ಗೊತ್ತಿದೆ. ಹೈನುಗಾರಿಕೆ ಸಹಕಾರ ಸಂಘಗಳ ಸದಸ್ಯರಾದ ಹಾಲು ಉತ್ಪಾದಕರಿಗೆ ಪಶು ಆರೋಗ್ಯ ರಕ್ಷಣೆ, ಕೃತಕ ಗರ್ಭಧಾರಣೆ, ಮೇವು ಅಭಿವೃದ್ಧಿ ಮುಂತಾದ ಅನೇಕ ಸೇವಾ ಸೌಲಭ್ಯ ಗಳನ್ನು ಒದಗಿಸಿದ್ದರೂ ಸದ್ಯದ ಹಾಲು ಸಂಗ್ರಹಣ ದರಗಳನ್ನು ಗಮನಿಸಿದರೆ ಹಾಲು ಉತ್ಪಾದನೆ ಯಿಂದ ಉತ್ಪಾದಕರಿಗೆ ಕಡಿಮೆ ವರಮಾನ ಬರುತ್ತಿರುವುದು ಸರ್ಕಾರಕ್ಕೆ ಗೊತ್ತಿದೆ. ಆದಕಾರಣ ಹಾಲಿನ ಸಂಗ್ರಹಣಾ ಬೆಲೆಯನ್ನು ಹೆಚ್ಚಿಸುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಹೆಚ್ಚಿನ ದರಗಳನ್ನು ಸದ್ಯದಲ್ಲಿಯೇ ಪ್ರಕಟಿಸಲಾಗುವುದು.

† ಶ್ರೀ ಕೆ. ಎಚ್. ಹನುಮೇಗೌಡ. — ಸ್ವಾಮಿ. ಮಾನ್ಯ ಸಚಿವರು ರೈತರಾಗಿದ್ದಾರೆ, ರೈತರ ಕಷ್ಟ ಏನು ಎಂಬುದು ಚೆನ್ನಾಗಿ ಗೊತ್ತಿದೆಂದು ಹೇಳಿ ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ, ಈ ಹಾಲಿನ ರೇಟ್‌ನ್ನು ೧೯೭೭ನೇ ಇಸ್ವಿಯಿಂದ ಇಲ್ಲಿಯ ತನಕ ೫ ಪೈಸೆ ಇಳಿಸುವುದು ೫ ಪೈಸೆ ಏರಿಸುವುದು ಮಾಡಿದ್ದಾರೆಯೇ ವಿನಹ ನ್ಯಾಯವಾಗಿ ಹಾಲನ್ನು ಉತ್ಪಾದನೆ ಮಾಡತಕ್ಕ ರೈತರು ಏನಿದ್ದಾರೆ, ಅವರು ಉತ್ಪಾದನೆ ಮಾಡತಕ್ಕ ಖರ್ಚು ಏನಿದೆ ಅದನ್ನು ಅವಲಂಬಿಸಿ ರೇಟನ್ನು ಹೆಚ್ಚಿಗೆ ಮಾಡಿಲ್ಲ. ಬೇರೆ ನಾಗರೀಕರು ಜೀವನ ಮಾಡುವಷ್ಟು ಮಟ್ಟಿಗಾದರೂ ಇದೆಯೇ ಎನ್ನುವುದನ್ನು ವಿಚಾರ ಮಾಡಿ ಈ ಒಂದು ಹೇಳಿಕೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ಆಂಧ್ರ ಪ್ರದೇಶದಲ್ಲಿ ಸಹ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಅಲ್ಲಿಯ ರೈತರಿಗೆ ಅವರು ೨೩% ಪೈಸೆ: ಕೊಡುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಸಹ ಬೇಸಿಗೆ ಕಾಲದಲ್ಲಿ ಮಿಶ್ರ ತಳಿ ಹಸುವಿನ ಹಾಲಿಗೂ ಸಹ ಲೀಟರ್‌ಗೆ ೨.೨೫ ಪೈಸೆ ಕೊಡುತ್ತಿದ್ದಾರೆ. ಮಳೆಗಾಲದ ಕಾಲದಲ್ಲಿ ೨.೩೦ ಪೈಸೆ ಕೊಡುತ್ತಿದ್ದಾರೆ ನಮ್ಮ ಕರ್ನಾಟಕ ರಾಜ್ಯಕ್ಕೂ ಆಲ್ಲಿಗೂ ಹೋಲಿಸಿದರೆ ತುಂಬಾ ಆಜಗಜಾಂತರ ವ್ಯತ್ಯಾಸವಿದೆ. ಆದುದರಿಂದ ನಮ್ಮ ಕರ್ನಾಟಕ ರಾಜ್ಯದ ರೈತರಿಗೂ ಆ ರೀತಿಯ ರೇಟ್ ದೊರೆಯುವ ಹಾಗೆ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರೇ. ಇದು ಏನಾಗಿದೆ ಎಂದರೆ ೧೯೭೭ನೇ ಇಸ್ವಿಯಲ್ಲಿ ಒಂದು ಸಾರಿ ೫ಪೈಸೆ ಏರಿಸಿದರು ಮತ್ತೆ ಪುನಃ ೫ಪೈಸೆ ಇಳಿಸಿದರು. ಇದರ ಜೊತೆಗೆ, ೨ ಸಾವಿರ ರೂ. ಗಳು ಇದ್ದ ಹಸುವಿನ ಬೆಲೆ ಇವತ್ತು ೪ ಸಾವಿರ ರೂಪಾಯಿಗಳಾಗಿದೆ. ಮತ್ತೆ ನಾವು ಈಗ ಮಿನಿಮಂ ವೇಜಸ್ಸ್ ಆಕ್ಟ್‌ನ್ನು ಜಾರಿಗೆ ತಂದಿರುವುದರಿಂದ ಹಿಂದೆ ೧-೨ ರೂಪಾಯಿಗಳ ಕೂಲಿಯನ್ನು ಹೆಂಗಸರಿಗೆ ಕೊಡುತ್ತಿದ್ದರೆ ಅದು ಈಗ ೪-೫ ರೂಪಾಯಿಗಳನ್ನು ಕೊಡಬೇಕಾಗಿದೆ. ಮತ್ತೆ ಹಾಲನ್ನು ಉತ್ಪಾದನೆ ಮಾಡತಕ್ಕ ರೈತರಿಗೆ ಒಂದಕ್ಕೆ ೪ ರಷ್ಟು ಖರ್ಚು ಬೀಳುತ್ತಿದ್ದೆ ಹೀಗಿರುವಾಗ ನೀವು ಕೇವಲ ೫ ಪೈಸೆ ಕೊಟ್ಟ ಹಾಗೆ ಮಾಡುವುದು ಮತ್ತೆ ಇಳಿಸುವುದು ಸರಿಯಲ್ಲ ಮತ್ತು ಅದು ಯೋಗ್ಯವಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲೇ ಬೇಕಾಗಿದೆ. ಇದು ಇನ್ನು ೪ ದಿವಸ ನಡೆದೀತು ಹೆಚ್ಚಿಗೆ ನಡೆಯುವುದಿಲ್ಲ. ಅದಕ್ಕಾಗಿ ಹೋರಾಟ ಮನ್ನೇ ಮಾಡಲು ಸಂಘ ಸಂಸ್ಥೆಗಳು ರೆಜಲ್ಯೂಷನ್ ಪಾಸ್ ಮಾಡಿದ್ದಾರೆ.

ಅಧ್ಯಕ್ಷರು.— ನಿಮಗೆ ಏನು ಕ್ಲಾರಿಫಿಕೇಷನ್ ಬೇಕೋ ಕೇಳಿ ಈ ತರಹ ಭಾಷಣ ಮಾಡಿದರೆ ಹೇಗೆ?

ಶ್ರೀ ಕೆ. ಎಚ್. ಹನುಮೇಗೌಡ .— ಅಧ್ಯಕ್ಷರೇ. ನಮ್ಮ ರಾಜ್ಯದ ೮ ಜಿಲ್ಲೆಗಳಲ್ಲಿ ಈ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನ ಯೋಜನೆ ಇದೆ. ಇದು ಬಡವರ ಮತ್ತು ದೀನ ದಲಿತರ ಅಭಿವೃದ್ಧಿಗೋಸ್ಕರವಾಗಿಯೇ ಎಂದು ಮಾಡಿ, ಅವರಿಗೆ ಸಬ್ಸೀಡಿಯಲ್ಲಿ ಸಾಲವನ್ನು ಕೊಡುತ್ತಿದ್ದೇವೆ. ಇದರಿಂದ ಅವರು ಒಂದೆರಡು ಹಸುಗಳನ್ನೂ, ಇಲ್ಲ ಎಮ್ಮೆಗಳನ್ನೂ ಇಟ್ಟು ಕೊಂಡು ಅವರು ಜೀವನ

ಮಾಡಬೇಕೊ, ಇಲ್ಲ ತೆಗೆದುಕೊಂಡ ಸಾಲವನ್ನು ವಾಪಸ್ಸು ಕೊಡಬೇಕೊ? ಅವನಿಗೆ ಬರತಕ್ಕ ದುಡ್ಡಿನಲ್ಲಿ ೩—೪ ಹಸುಗಳಿಗೇ ಖರ್ಚು ಮಾಡಿದರೆ ಇನ್ನು ಆದರ ಉತ್ಪಾದನೆಯನ್ನೇ ನಂಬಿಕೊಂಡಿರತಕ್ಕ ಅವರ ಸಂಸಾರದಲ್ಲಿರತಕ್ಕವರ ಜೀವನ ಹೇಗೆ ಮಾಡಬೇಕು? ಮತ್ತೆ ಸಾಲವನ್ನು ಹೇಗೆ ತಿರಿಸಬೇಕು? ದಯಮಾಡಿ ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಇವತ್ತು ಬೆಂಗಳೂರು, ಮೈಸೂರು, ತುಮಕೂರು, ಹಾಸನ ಮುಂತಾದ ಪಟ್ಟಣಗಳಲ್ಲಿ ವಾಸ ಮಾಡಿಕೊಂಡಿದ್ದು, ಈ ವಿಶ್ರ ತಳಿ ಹಸುಗಳನ್ನು ಮನೆಯ ಮುಂದೆ ಹಾಲನ್ನು ಕರೆದು ಕೊಟ್ಟರೆ ಅವರಿಗೇನೂ ರೂ. ೨೫೦ ೨೪೦ ದುಡ್ಡು ಸಿಗುತ್ತದೆ, ಅದೇ ನೀವು ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರಿಗೆ ಕೇವಲ ರೂ. ೧೪೦ ಪೈಸೆ ಕೊಡುವುದು. ಯಾವ ನ್ಯಾಯ? ಇದರಿಂದಾಗಿ ಹಳ್ಳಿಯಲ್ಲಿರತಕ್ಕವರು ಹೊಟ್ಟೆಗಿಲ್ಲದೇ ಸಾಯುತ್ತಿದ್ದಾರೆ. ಆದುದರಿಂದ ತಾವು ಬಡವರ ಉದ್ಧಾರಕ್ಕಾಗಿಯೇ ಇರುವ ಸರ್ಕಾರವೆಂದು ಹೇಳುವವರು, ಅವರಿಗೆ ಸಬ್ಸೀಡಿಯಲ್ಲಿ ಸಾಲ ಕೊಟ್ಟಿದ್ದೇವೆಂದು ನ್ಯಾಯವಾದ ಬೆಲೆಯನ್ನು ಕೊಡದೇ ಇರುವುದು ಯಾವ ನ್ಯಾಯ? ಅವರೇನು ದೇಶಕೋಸ್ಕರ ದುಡಿಯುತ್ತಿಲ್ಲವೇ? ಅವರಿಗೆ ತಾವು ಸೂಕ್ತವಾದ ಬೆಲೆಯನ್ನು ನಿಗದಿ ಮಾಡದಿದ್ದರೆ, ಕೆಲವು ಸಂಘ ಸಂಸ್ಥೆಗಳು ಮುಷ್ಕರ ಹೂಡಿ, ಚಳುವಳಿ ಮಾಡುವುದಕ್ಕೆ ರೆಜಲ್ಯೂಷನ್ ಪಾಸ್ ಮಾಡಿದ್ದಾರೆ ಎನ್ನುವ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತಿದ್ದೇನೆ. ಬರೀ ನೀವು ೫—೧೦ ಪೈಸೆ ಹೆಚ್ಚಿಗೆ ಮಾಡಿರುವುದಾದರೆ ನಾವು ಯಾರೂ ಹಳ್ಳಿಗಳಿಂದ ಬರತಕ್ಕ ಶಾಸಕರುಗಳು ಯಾಪಿಟ್ಟೇವೆ, ಇದನ್ನು ಒಪ್ಪುವುದಕ್ಕಾಗುವುದಿಲ್ಲ, ನ್ಯಾಯವಾದ ಬೆಲೆಯನ್ನು ಹಾಲನ್ನು ಉತ್ಪಾದನೆ ಮಾಡತಕ್ಕವರಿಗೆ ತಾವು ಕೊಡಲೇ ಬೇಕಾಗುತ್ತದೆ.

ಅಧ್ಯಕ್ಷರು .— ನೇರವಾಗಿ ಪ್ರಶ್ನೆಯನ್ನು ಕೇಳಿ ಏನು ಈ ರೀತಿಯಾಗಿ ಕ್ಲಾರಿಫಿಕೇಷನ್ ಕೇಳುತ್ತೇ ನೆಂದು ಭಾಷಣ ಮಾಡುವುದು ಸರಿಯಲ್ಲ.

ಶ್ರೀ ಕೆ. ಎಚ್. ಹನುಮೇಗೌಡ .— ೩ ವರ್ಷಗಳಿಂದಲೂ ಹೆಚ್ಚಿಗೆ ಮಾಡದಿದ್ದರೆ ಏನು ಮಾಡ ಬೇಕು ನೀವೆ ಹೇಳಿ ಸ್ವಾಮಿ? ಅದಕ್ಕೆ ಸ್ವಲ್ಪ ಸುಮ್ಮನಿರ್ರಿ ಪ್ರಶ್ನೆ ಕೇಳಿ ಬಿಡುತ್ತೇನೆ.

ಅಧ್ಯಕ್ಷರು .— ನಾನು ಇಲ್ಲಿ ಚೇರ್ಮನ್ ಆಗಿ ಸುಮ್ಮನೇ ಕೂತಿರುವುದಕ್ಕೆ ಅಲ್ಲ, ನಾನು ಹೇಳಿದ ಹಾಗೆ ನೀವು ಕೇಳಬೇಕಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.— ೩ ವರ್ಷಗಳಿಂದಲೂ ರೇಟ್ ಜಾಸ್ತಿ ಮಾಡದೇ ಇರುವುದರಿಂದ ಏನು ಮಾಡಬೇಕೆಂಬುದನ್ನು ತಾವು ಆದರೂ ಹೇಳಿ ಬಿಡಿ. ಅದಕ್ಕೆ ತಾವು ಸುಮ್ಮನೇ ಇರ್ರಿ ನಾನು ಸರ್ಕಾರದವರಲ್ಲಿ ಕೇಳಿ ಬಿಡುತ್ತೇನೆಂದು ಹೇಳುತ್ತಿರುವುದು.

ಅಧ್ಯಕ್ಷರು .— ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಸಭೆಯಲ್ಲಿ ಹೇಗೆ ವರ್ತನೆ ಮಾಡ ಬೇಕೆಂಬುದು ತಿಳಿಯದಿದ್ದರೆ ಹೇಗೆ ? ಸಭೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಗಮನಕ್ಕೆ ತೆಗೆದು ಕೊಳ್ಳದೇ ಈ ರೀತಿ ಆಲೆದಾಡುತ್ತಿದ್ದರೆ ಹೇಗೆ? ಮಾನ್ಯ ಶ್ರೀ ಹನುಮೇಗೌಡರವರೇ ಕಾಲಿಂಗ್ ಅಟೆನ್ಷನ್ ನಲ್ಲಿ ಇಷ್ಟೆಲ್ಲಾ ಪ್ರಾತಿನಾಡುವುದಕ್ಕೆ ಸ್ಕೋಪ್ ಇಲ್ಲ. ಅಪರು ಮಾಡಿರತಕ್ಕ ಸ್ಟೇಟ್‌ಮೆಂಟಿನಲ್ಲಿ ಏನಾದರೂ ಸ್ಪಷ್ಟೀಕರಣ ಬೇಕಾಗಿದ್ದರೆ ಕೇಳಿ. ಸಭೆಯ ಟೈಮ್ ವೇಸ್ಟ್ ಮಾಡಬೇಡಿ.

ಶ್ರೀ ಕೆ. ಎಚ್. ಹನುಮೇಗೌಡ. — ಅದೇ ಪ್ರಶ್ನೆಗೆ ಬಂದು ಬಿಡುತ್ತಿದ್ದೆನೆ. ಆದುದರಿಂದ ಇವತ್ತು ಏನು ಬೆಲೆಯನ್ನು ಏರಿಸುತ್ತೇವೆಂದು ಹೇಳುತ್ತಿದ್ದಾರೆ ಅದನ್ನು ಮಾಡುವುದಕ್ಕಿಂತ ಮುಂಚೆ ಅವನಿಗೆ ನಿಜವಾಗಿಯೂ ಎಷ್ಟು ಖರ್ಚು ಬೀಳುತ್ತದೆಂಬುದನ್ನು ನೋಡಿ ಅವರಿಗೆ ನ್ಯಾಯವಾದ ಬೆಲೆಯನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರೈತರ ಕಷ್ಟವೇನೆಂಬುದು ಮಾನ್ಯ ಸಚಿವರಿಗೂ ಗೊತ್ತಿದೆ. ಅವರ ಮನೆಯಲ್ಲೂ ಸಹ ಹಸುಗಳಿವೆಂದು ತಿಳಿದುಕೊಂಡಿದ್ದೇನೆ ಅದಕ್ಕೆ ಶಾಸ್ತ್ರೀಯವಾಗಿ ಎಷ್ಟು ಖರ್ಚು ಬೀಳುತ್ತದೆಂಬುದನ್ನು ನೋಡಿ ಮಾಡುವುದು ಸೂಕ್ತ ವೆಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿ–ಕೊಳ್ಳುತ್ತೇನೆ.

ಶ್ರೀ ಪಿ. ಎನ್. ರೆಡ್ಡಿ .— ಅಧ್ಯಕ್ಷರೇ, ಶ್ರೀ ಹನುಮೇಗೌಡರವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ನಾನು ಮಾನ್ಯ ಮಂತ್ರಿಗಳವರ ಗಮನಕ್ಕೆ ಇಷ್ಟು ಮಾತ್ರ ಸೆಳೆಯುವುದು ಏನೆಂದರೆ ಬಹುತೇಕವಾಗಿ ಹಳ್ಳಿಯ ರೈತರು ಅವರ ನಿತ್ಯ ಸಂಸಾರವನ್ನು ಈ ಹಾಲಿನ ಉತ್ಪಾದನೆಯಿಂದಲೇ

ಊಟ, ಬಟ್ಟೆ ಮಗೈರೆ ಜೀವನವನ್ನು ನಡೆಸುತ್ತಿದ್ದಾರೆ. ಅವರಿಗೆ ನ್ಯಾಯವಾದ ರೇಟ್‌ನ್ನು ಹೆಚ್ಚಿಗೆ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳವರು ಆಶ್ವಾಸನೆ ಕೊಡಬೇಕು. ಅನೇಕರು ಪಾಪ ಭಾವಿಸಿರಬಹುದು, ಇನ್ನು ಹಳ್ಳಿಯವರು ಗಮ್ಮಾರರು ಅಂತ, ದಯಮಿಟ್ಟು ಅವನ್ನು ಮಾರೆತು ಬಿಡಿ, ಅವರೇ ಕ್ರಾಂತಿಯನ್ನು ಪ್ರಾರಂಭಿಸುವವರು, ನಾಳೆ ದಿವಸ ವಿಧಾನ ಸೌಧ ಚಲೋ ಮಾಡಿ ಬಿಡುತ್ತಾರೆ. ಆದುದರಿಂದ ಅವರಿಗೆ ಯೋಗ್ಯವಾದ ರೇಟ್‌ನ್ನು ಕೊಟ್ಟು ರೈತರ ಉದ್ಧಾರ ಯಾವರೀತಿಯಾಗಿ ಮಾಡಬೇಕೋ ಅದನ್ನು ಆದಷ್ಟು ಬೇಗ ಮಾಡಿ, ಆದಷ್ಟು ಶೀಘ್ರದಲ್ಲಿ ಈ ಕೊಳ್ಳುವ ರೇಟ್‌ನ್ನು ಹೆಚ್ಚಿಸಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಡಿ. ಟಿ. ರಾಮು .— ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲೂ ಸಹ ಒಂದು ಹಾಲು ಸಂಗ್ರಹಣಾ ಕೇಂದ್ರ ಇದೆ. ರೈತರನ್ನು ಉದ್ಧಾರ ಮಾಡಬೇಕೆಂಬ ಸದುದ್ದೇಶದಿಂದಲೇ ಏನು ಹೈನು ಅಭಿವೃದ್ಧಿ ಸಂಸ್ಥೆ ಅಸ್ತಿತ್ವಕ್ಕೆ ಬಂದಿದೆಯೋ ಅದಕ್ಕೆ ವಿರುದ್ಧವಾಗಿ ಈ ಸಂಸ್ಥೆ ಕೆಲಸ ಮಾಡುತ್ತಿದೆ. ರೈತರ ಉದ್ಧಾರ ಮಾಡತಕ್ಕ ರೀತಿಯಲ್ಲಿ ಅದು ಕೆಲಸ ಮಾಡುತ್ತಿಲ್ಲ. ೧೯೭೭ ರಿಂದ ೧೯೭೯ರ ವರೆಗೆ ನೋಡಿದರೆ ಹಾಲಿನ ಬೆಲೆಯಲ್ಲಿ ಕೇವಲ ೫ ಪೈಸೆಯಲ್ಲೇ ಕತ್ತಾಟ ನಡೆಯುತ್ತಿದೆ. ಹೋದಸಾರಿ ಪಶುಗಳ ಆಹಾರ ೧ ಕೆ.ಜಿ.ಗೆ ೮೦ಪೈಸೆ ಇದ್ದದ್ದು ಇವತ್ತು ೧-೪೦ ಪೈಸೆ ಆಗಿದೆ. ಬೂಸಾ ಬೆಲೆ ಹೆಚ್ಚಿದೆ. ಹಿಂಡಿ ಬೆಲೆ ಹೆಚ್ಚಿದೆ. ಎಲ್ಲಾ ಬೆಲೆಯೂ ಹೆಚ್ಚಿರುವಾಗ ರೈತ ಉತ್ಪತ್ತಿ ಮಾಡತಕ್ಕ ಹಾಲಿನ ಬೆಲೆ ಮಾತ್ರ ಹೆಚ್ಚಿಸಿಲ್ಲ. ಪಟ್ಟಣದಲ್ಲಿ ಒಂದು ಲೀಟರ್‌ಗೆ ಎರಡು ರೂಪಾಯಿ ಕೊಡುತ್ತೀರಿ. ಆದರೆ ಹಳ್ಳಿಗಾಡಿನಲ್ಲಿ ೧-೪೦ ಪೈಸೆ ಕೊಡುತ್ತೀದ್ದಿರಿ, ಆದರೆ ಮಾನ್ಯ ಸಚಿವರು ೧-೫೫ ಪೈಸೆ ಸಿಗುತ್ತದೆ ಎಂದು ಹೇಳುತ್ತಾರೆ. ಅಷ್ಟು ಸಿಗುವುದಿಲ್ಲ.

ಅಧ್ಯಕ್ಷರು .— ನೀವು ಕ್ಲಾರಿಫಿಕೇಷನ್ ಕೇಳಿ ಎಂದರೆ ನೀವೇ ಒಂದು ಚಿಕ್ಕ ಸ್ಟೇಟ್‌ಮೆಂಟ್ ಮಾಡುತ್ತಿದ್ದಹಾಗೆ ಕಾಣುತ್ತಿದೆಯಲ್ಲ. ಗಮನ ಸೆಳೆಯುವ ಸೂಚನೆಯಲ್ಲಿ ನಿಮಗೆ ಬೇಕಾದ ಮಾಹಿತಿ ಗಳನ್ನು ಮಾತ್ರ ಕೇಳಬೇಕು.

ಶ್ರೀ ಡಿ. ಟಿ. ರಾಮು .— ಮಾನ್ಯ ಸಚಿವರು ಏನು ಸ್ಟೇಟ್‌ಮೆಂಟ್ ಮಾಡಿದ್ದಾರೋ ಅದರ ಮೇಲೆ ಮಾತನಾಡುತ್ತಿದ್ದೇನೆ. ೧-೮೫ ಪೈಸೆ ಯಾವ ರೈತನಿಗೂ ಸಿಕ್ಕುತ್ತಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿ ಹಾಲು ಉತ್ಪಾದನೆ ಮಾಡುವ ರೈತನಿಗೆ ಕನಿಷ್ಟಪಕ್ಷ ಒಂದು ಲೀಟರಿಗೆ ಎರಡು ರೂಪಾಯಿ ಯಾದರೂ ಕೊಡಲೇಬೇಕು. ಆಂಧ್ರ ಪ್ರದೇಶದಲ್ಲಿ ತಮಿಳುನಾಡಿನಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಈ ಪದ್ಧತಿ ಉಂಟು. ಆದ್ದರಿಂದ ನಮ್ಮ ಸರ್ಕಾರದವರು ರೈತನ ನೆರವಿಗೆ; ಆತನ ಸಂಕಷ್ಟ ಪರಿಸ್ಥಿತಿಯನ್ನು ಪಾರು ಮಾಡುವುದಕ್ಕೆ ನೇರವಾಗಿ ಕನಿಷ್ಟಪಕ್ಷ ಒಂದು ಲೀಟರಿಗೆ ಎರಡು ರೂಪಾಯಿಯನ್ನಾದರೂ ಕೊಡುವಂತೆ ವ್ಯವಸೆ ಮಾಡಬೇಕೆಂದು ಮಾನ್ಯ ಪಶುಸಂಗೋಪನಾ ಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಮದೇವ್ .— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹಾಲು ಉತ್ಪಾದಕರಿಗೆ ಹೆಚ್ಚು ಹಣವನ್ನು ಕೊಡಬೇಕೆಂದು ಏನು ಹೇಳುತ್ತಿದ್ದಾರೋ ಅವನ್ನು ನಾನು ವಿರೋಧ ಮಾಡುವುದಿಲ್ಲ. ಉತ್ಪಾದಕರಿಗೆ ಹೆಚ್ಚು ಬೆಲೆ ಕೊಡಿ, ಅದಕ್ಕೆ ನಾನು ವಿರೋಧಿಸುವುದಿಲ್ಲ ಆದರೆ ಗ್ರಾಹಕರ ಮೇಲೆ ಹೆಚ್ಚು ಹೊರೆ ಬೀಳದಂತೆ ನೋಡಿಕೊಳ್ಳುವುದಾಗಿ ಮಾನ್ಯ ಮಂತ್ರಿಗಳು ಭರವಸೆ ಕೊಡಬೇಕು.

ಶ್ರೀ ಕೆ. ಹೆಚ್. ಹನುಮೇಗೌಡ .— ಹಳ್ಳಿ ಜನರಿಗೆ ಏನಾದರೂ ಪರ್ವಾಗಿಲ್ಲ ಎಂದು ಇವರು ಹೇಳುತ್ತಾರೆ ...

ಶ್ರೀ ಪಿ. ರಾಮದೇವ್ .— ನಾನು ಅವರ ವಾದವನ್ನು ವಿರೋಧ ಮಾಡುತ್ತಿಲ್ಲ. ಅವರಿಗೆ ಏತಕ್ಕೆ ಕೋಪ?

ಅಧ್ಯಕ್ಷರು.—ನೀವು ಆ ಕಡೆ ನೋಡಬೇಡಿ. ನನ್ನ ಕಡೆ ನೋಡಿಕೊಂಡು ಮಾತನಾಡಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಅವರು ಮಾತನಾಡಿದಮೇಲೆ ನಾನು ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಹಳ್ಳಿ ಜನರ ಕಷ್ಟ ಅವರಿಗೇನು ಗೊತ್ತು?

ಶ್ರೀ ಡಿ ಟಿ. ರಾಮು.—ಮಾನ್ಯ ಸದಸ್ಯರಾದ ರಾಮದೇವ್ ಅವರು ಹೀಗೆ ಹೇಳಿದರೆ, ನಾವು ಹಳ್ಳಿ ಜನರಿಗೆ ಪಟ್ಟಣಕ್ಕೆ ಹಾಲು ಕಳಿಸಬೇಡಿ ಎಂದು ಹೇಳಬೇಕಾಗುತ್ತದೆ.

SRI B. B. SAYANAK.—Sir, I rise to a point of order. I request the Hon. Chief Minister Sri R. Gundu Rao to start a coaching class

for new M.L.A.s as to how to seek clarification in a Call attention matter.

ಶ್ರೀ ಡಿ. ಟಿ. ರಾಮು. — ಮಾನ್ಯ ಸಯನಕ್ ರವರಿಗೆ ಮಹಾರಾಷ್ಟ್ರ ಬೆಳಗಾಂ ಎರಡು ಬಿಟ್ಟರೆ ಇನ್ನೇನೂ ಬೇಕಾಗಿಲ್ಲ.

ಶ್ರೀ ಪಿ. ರಾಮದೇವ್. — ನಮ್ಮ ಬೆಂಗಳೂರು ನಗರಕ್ಕೆ ೧.೬ ಲಕ್ಷ ಲೀಟರ್ ಹಾಲನ್ನು ಸರಬರಾಜು ಮಾಡುತ್ತಿದ್ದಾರೆ. ಹಾಲನ್ನು ಉತ್ಪಾದನೆ ಮಾಡತಕ್ಕವರಿಗೆ ಸಂಗ್ರಹಣಾ ಬೆಲೆಯನ್ನು ಎಷ್ಟು ಬೇಕಾದರೂ ಕೊಡಿ. ಆದರೆ ಆ ಭಾರವನ್ನು ಗ್ರಾಹಕರ ಮೇಲೆ ಹಾಕಬೇಡಿ. ನಮಗೆ ಅಷ್ಟು ಹೆಚ್ಚು ಹಣ ಕೊಡುವುದಕ್ಕೆ ಶಕ್ತಿ ಇಲ್ಲ. ಗ್ರಾಮಾಂತರ ಪ್ರದೇಶದವರಿಗೆ ಏನಾದರೂ ಸೌಲಭ್ಯ ಕೊಡಿ. ನಾವು ಅಡ್ಡಿ ಬರುವುದಿಲ್ಲ. ರೈತರೂ ಉದ್ಧಾರವಾಗಬೇಕು ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ದಯವಿಟ್ಟು ಅದರ ಹೊರೆಯನ್ನು ಗ್ರಾಹಕರ ಮೇಲೆ ಹಾಕಬೇಡಿ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ. — ಸನ್ಮಾನ್ಯ ಅಧ್ಯಕ್ಷರೇ, ಪ್ರೊಕ್ಯೂರ್‌ಮೆಂಟ್ ರೇಟಿನಲ್ಲಿ ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ವ್ಯತ್ಯಾಸ ಇದೆ ಎಂಬುದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಇದನ್ನು ಹೋಗಲಾಡಿಸಲು ಒಂದೇ ತರನಾದ ರೇಟನ್ನು ನಿಗದಿ ಮಾಡುತ್ತೀರಾ? ಗ್ರಾಮಾಂತರ ಪ್ರದೇಶದವರಿಗೆ ನಷ್ಟವನ್ನು ತುಂಬಿಕೊಡಲು ಸರ್ಕಾರದ ವತಿಯಿಂದ ಪಣ ಕೊಡಿಸುವುದಕ್ಕೆ ಸಾಧ್ಯವೇ ಎಂಬುದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ. — ಸನ್ಮಾನ್ಯ ಅಧ್ಯಕ್ಷರೇ ನನ್ನ ಸ್ಟೇಟ್‌ಮೆಂಟಿನಲ್ಲಿ ಏನು ಹೇಳಿದ್ದೀನೋ ಅದನ್ನೇ ಮಾನ್ಯ ಸದಸ್ಯರು ಸ್ವಲ್ಪ ಜೋರಾಗಿ ಹೇಳಿದ್ದಾರೆ. ಎಲ್ಲಾ ಪರಿಶೀಲನೆ ಮಾಡಿ ಯೋಗ್ಯ ಬೆಲೆಯನ್ನು ನಾವು ನಿಗದಿ ಮಾಡುವುದಕ್ಕೆ ಒಪ್ಪಿಕೊಂಡಿದ್ದೇವೆ. ನಾನು ಮಾನ್ಯ ಹನುಮೇಗೌಡರಿಗೆ ಹೇಳುತ್ತಿದ್ದೇ. ಹಾಲಿನ ಬೆಲೆ ನಿಗದಿ ಮಾಡತಕ್ಕದ್ದು ಆದರಲ್ಲಿ ದೊರೆಯುವ ಕೊಬ್ಬಿನ ಅಂಶದ ಮೇಲೆ. ತಮಿಳುನಾಡಿನಲ್ಲಿ ಎಷ್ಟಿದೆ ಎಂಬುದನ್ನು ಮಾನ್ಯ ಸದಸ್ಯರು ಹೇಳಿದರು.....

ಶ್ರೀ ಕೆ. ಹೆಚ್. ಹನುಮೇಗೌಡ. — ತಮಿಳುನಾಡಿನ ವಿಷಯ ನಾನು ಹೇಳಲಿಲ್ಲ. ಮಹಾರಾಷ್ಟ್ರ, ಪಶ್ಚಿಮ ಬಂಗಾಳದ ವಿಷಯ ನಾನು ಹೇಳಿದೆ.

† ಶ್ರೀ ವೈ. ರಾಮಕೃಷ್ಣ. — ನೀವಲ್ಲದಿದ್ದರೆ ಬೇರೆ ಯಾರೋ ಸದಸ್ಯರು ಹೇಳಿದ್ದಾರೆ. ಅಲ್ಲಿ ಕೊಬ್ಬಿನ ಅಂಶ ಜಾಸ್ತಿ ಇರುವುದರಿಂದ ಆದಕ್ಕೆ ಜಾಸ್ತಿ ಪಣ ಕೊಡುತ್ತಿದ್ದಾರೆ. ನಾವು ನಿಗದಿ ಮಾಡಿರುವುದು ಶೇ. ೩.೫ ರಷ್ಟು ಇರಬೇಕು ಎಂದು. ತಮಿಳುನಾಡಿನಲ್ಲಿ ೪.೫ % ರಷ್ಟಿದೆ ಮತ್ತೊಬ್ಬ ಸದಸ್ಯರು ರೂ. ೧-೮೫ ನ್ನು ಸಹ ನಮ್ಮಲ್ಲಿ ಕೊಡುತ್ತಿಲ್ಲ ಎಂದು ಹೇಳಿದರು. ೫.೫% ಕೊಬ್ಬಿನ ಅಂಶ ಇದ್ದರೆ ಉದಾಹರಣೆಗೆ ಎಮ್ಮೆ ಹಾಲಿಗೆ ರೂ. ೧-೮೫ ಕೊಡುತ್ತಿದ್ದೇವೆ. ಏತಕ್ಕೇಂದರೆ ಆದರಲ್ಲಿ ಕೊಬ್ಬಿನ ಅಂಶ ಹೆಚ್ಚಾಗಿದೆ. ಹೀಗೆ ಮೇದಸ್ಸಿನ ಅಂಶದ ಮೇಲೆ ಬೆಲೆ ನಿಗದಿ ಮಾಡಲಾಗುತ್ತಿದೆ. ಬೆಳ್ಳಗಿರುವುದೆಲ್ಲಾ ಹಾಲೇ ಆದ್ದರಿಂದ ಎಲ್ಲ ಹಾಲಿಗೂ ಹೆಚ್ಚು ಹಣ ಕೊಡಿ ಎಂದು ಹೇಳಿದರೆ ಅದು ಸಾಧುವಾದುದಲ್ಲ. ರೈತರು ಸ್ಪಲಂಬಿಸಿರತಕ್ಕ ಹೈನುಗಾರಿಕೆ ಕಡಿಮೆ ಹಣಕೊಟ್ಟು ಅವರನ್ನು ಲಿಕ್ವಿಸನು ಮಾಡಬೇಕೆಂಬುದು ಇಮ್ಮ ಉದ್ದೇಶವಲ್ಲ. ಸರ್ಕಾರಕ್ಕೇನೂ ಡೈರಿಯಿಂದ ಲಾಭ ಬರುತ್ತಿಲ್ಲ. ನ್ಯಾಯವಾದ ಬೆಲೆಯನ್ನು ನಗದಿ ಮಾಡುವುದಕ್ಕೆ ಸರ್ಕಾರ ಯಾವಾಗಲೂ ಹಿಂಜರಿಯುವುದಿಲ್ಲ, ಆದ್ದರಿಂದ ಎಲ್ಲ ಅಂಕಿಅಂಶ ನಿಳನ್ನೂ ಸಂಗ್ರಹಿಸಿ ಬೆಲೆ ನಿಗದಿ ಮಾಡುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ, ಮಾನ್ಯ ಗದಸ್ಯರ ಸಲಹೆಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ಸರ್ಕಾರ ಬೆಲೆ ನಿಗದಿ ಮಾಡುತ್ತದೆ.

re: (ii) The in ordinate delay in the execution of work for Drinking Water Supply to Gudibande Town in Kolar District.

SRI S. MUNI RAJU.—Sir, I call the attention of the Hon. Minister for Housing and Urban Development to the inordinate delay in the execution of work for Drinking Water Supply to Gudibande Town in Kolar District.